ಓ ಎಸ್ಃ 399/2020

ಪಿ ಡಬ್ಲ್ಯೂ ಃ 1

ದಿನಾಂಕಃ 17.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ವಾಟೀ ಸವಾಲುಃ ಪ್ರತಿವಾದಿ 6 ರಿಂದ 10 ರವರ ಪರ ಶ್ರೀ ಎಲ್ ಜಿ ಜಿ ವಕೀಲರಿಂದಃ**

ಪ್ರತಿವಾದಿ 1 ರಿಂದ 5 ರವರು ಸಾಸಿವೆ ಘಟ್ಟದಲ್ಲಿ ವಾಸವಾಗಿರುತ್ತಾರೆ. ಪ್ರತಿವಾದಿ 6 ರಿಂದ 10 ರವರನ್ನು ನಾನು ಈ ದಾವೆಗೆ ಸೇರಿಸಿರುವುದಿಲ್ಲ. ಪ್ರತಿವಾದಿ 6 ರಿಂದ 10 ರವರು ಆಲೂರು ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಕರಾರಿನಲ್ಲಿ ತೋರಿಸಿರುವ ವಿಳಾಸದಲ್ಲಿ ಪ್ರತಿವಾದಿ 1 ರಿಂದ 5 ರವರು ವಾಸವಾಗಿಲ್ಲದೇ ಸಾಸಿವೆ ಘಟ್ಟದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಆಲೂರು ಗ್ರಾಮದಲ್ಲಿ ವಾಸವಾಗಿರುತ್ತೇವೆ ಎಂದು ತೋರಿಸಲು ಪ್ರತಿವಾದಿ 1 ರಿಂದ 5 ರವರು ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಸರಿ. ನಾನು ನಮ್ಮ ವಕೀಲರಿಂದ ತಿಳುವಳಿಕೆ ನೋಟೀಸ್ ನ್ನು ಕೂಡ ಆಲೂರು ಗ್ರಾಮದಲ್ಲಿ ಪ್ರತಿವಾದಿಗಳು ವಾಸವಾಗಿರುತ್ತಾರೆ ಎಂದು ಅವರಿಗೆ ಲೀಗಲ್ ನೋಟೀಸ್ ನ್ನು ನೀಡಿರುತ್ತಾರೆ ಎಂದರೆ ಸರಿ. ಆಲೂರು ಗ್ರಾಮದಲ್ಲಿ ವಾಸವಾಗಿರುತ್ತಾರೆ ಈ ದಾವೆಯನ್ನು ಕೂಡ ನ್ಯಾಯಾಲಯದಲ್ಲಿ ದಾಖಲು ಮಾಡಿಲ್ಲ ಎಂದರೆ ಸರಿ. ಸಾಸಿವೆ ಘಟ್ಟದಲ್ಲಿ ಪ್ರತಿವಾದಿ 1 ರಿಂದ 5 ರವರು ವಾಸವಾಗಿರುತ್ತಾರೆ ಎಂದು ತೋರಿಸಲು ನಾನು ಆಧಾರ್ ಕಾರ್ಡ್ ನ್ನು ನ್ಯಾಯಾಲಯಕ್ಕೆ ನೀಡುತ್ತೇನೆ .

ನನಗೆ ಪ್ರತಿವಾದಿ 6 ರಿಂದ 10 ರವರು ಯಾರೆಂದು ಪರಿಚಯ ಇರುವುದಿಲ್ಲ. ಪ್ರತಿವಾದಿ 6 ರಿಂದ 10 ರವರು ಮುನಿಮಾರಮ್ಮ ನವರ ಮಕ್ಕಳೆಂದು ನಮ್ಮ ವಕೀಲರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿ ಪಹಣಿಯಲ್ಲಿ ಸದರಿ ಹೆಸರು ಇದ್ದ ಕಾರಣ ನಮ್ಮ ವಕೀಲರಿಗೆ ನಾನು ಅದನ್ನು ತೋರಿಸಿದ ಮೇರೆಗೆ ನಮ್ಮ ವಕೀಲರು ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ. ಪ್ರತಿವಾದಿ 1 ರಿಂದ 5 ಮತ್ತು ಪ್ರತಿವಾದಿ 8 ರಿಂದ 10 ರವರು ವಾಸವಾಗಿರುವ ಒಂದೇ ಮನೆಯ ವಿಳಾಸವನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ **ಪ್ರತಿವಾದಿ** 6 ರಿಂದ 10 ರವರ ಹೆಸರು ಯಾವ ಆಧಾರದ ಮೇಲೆ ಬಂದಿರುತ್ತದೆ ಎಂದರೆ ಸಾಕ್ಷಿ ಸದರಿ ಅವರು ಪ್ರತಿವಾದಿ 2 ರವರ ಮೇಲೆ ದಾವೆಯನ್ನು ಹೂಡಿದ್ದು, ಸದರಿ ದಾವೆ ನ್ಯಾಯಾಲಯದಲ್ಲಿ ಇತ್ಯರ್ಥ ಆದ ಮೇಲೆ ಅವರ ಹೆಸರು ಪಹಣಿಯಲ್ಲಿ ತೋರಿಸಲಾಗಿರುತ್ತದೆ.

ನನಗೆ ಕರಾರು ಮಾಡಿಕೊಟ್ಟಿರುವುದು ಮತ್ತು ಪ್ರತಿವಾದಿ 6 ರಿಂದ 10 ರವರು ಮುನಿಮಾರಮ್ಮ ನವರ ಮಕ್ಕಳು ಮತ್ತು ಮೊಮ್ಮಕ್ಕಳು ಎಂದರೆ ಗೊತ್ತಿಲ್ಲ . ನಾನು ಖರೀದಿ ಮಾಡುವಾಗ ಯಾವ ದಾಖಲಾತಿಗಳನ್ನು ನೋಡಿ ಸದರಿ ಕರಾರನ್ನು ಮಾಡಿಕೊಂಡಿರುತ್ತೇನೆ ಎಂದರೆ ನಾನು ಪಹಣಿಯನ್ನು, ಎಂ ಆರ್ ವಹಿಯನ್ನು , tax receipt ನ್ನು ಮತ್ತು ಇತರೇ ದಾಖಲಾತಿಗಳನ್ನು ಕೊಟ್ಟಿದ್ದು ಅವುಗಳ ನೆನಪು ನನಗೆ ಈಗ ಬರುತ್ತಿಲ್ಲ.

ಮುನಿಮಾರಮ್ಮ ನವರ ಗಂಡ ಗಿರಿಯಪ್ಪ ನವರು ತೀರಿಕೊಂಡ ನಂತರ ಮುನಿಮಾರಮ್ಮ ನವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ನಾನು ಕರಾರು ಮಾಡಿಕೊಳ್ಳುವಾಗ ಅಧಿಕೃತವಾಗಿ ವಂಶವೃಕ್ಷವನ್ನು ಪಡೆದುಕೊಂಡಿರುತ್ತೇನೆ. ಆ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಕೊಡುತ್ತೇನೆ. ಮುನಿಮಾರಮ್ಮ ನವರ ಮನೆಯ ಜಾಗಕ್ಕೂ , ನಾನು ವಾಸವಾಗಿರುವ ಜಾಗಕ್ಕೂ ಸುಮಾರು 8 ಕಿ.ಮೀಟರ್ ಅಂತರವಿರುತ್ತದೆ. ನನ್ನ ವಾಸವಾಗಿರುವ ಸ್ಥಳಕ್ಕೂ ಮತ್ತು ದಾವಾ ಸ್ವತ್ತಿಗೂ ಸುಮಾರು 32 ಕಿ.ಮೀಟರ್ ಅಂತರವಿರುತ್ತದೆ. ದಾವಾ ಸ್ವತ್ತನ್ನು ಮುನಿಮಾರಪ್ಪ ಮತ್ತು ಚನ್ನಪ್ಪ ನವರು ಮಾರಾಟ ಮಾಡುತ್ತಾರೆ ಎಂದು ಸಾಕ್ಷಿದಾರರು ಸಹಿ ಹಾಕಿರುವ ಆಂಜನಪ್ಪ, ಚನ್ನಪ್ಪ ನವರು ಹೇಳಿರುತ್ತಾರೆ. ಸದರಿ ಜಮೀನು ಕೊಂಡುಕೊಳ್ಳಬೇಕೆಂದು ನಾನು ತೀರ್ಮಾನ ಮಾಡಿದ ನಂತರ ಪ್ರತಿವಾದಿಗಳ ಮನೆಗೆ ಹೋಗಿರುತ್ತೇನೆ. ಆ ಊರಿನಲ್ಲಿ ಮುನಿಮಾರಮ್ಮ ನವರಿಗೆ ಎಷ್ಟು ಜನ ಮಕ್ಕಳೆಂದು ನಾನು ವಿಚಾರಣೆ ಮಾಡಿರುವುದಿಲ್ಲ.

ಈ ಕರಾರು ಆದ ಮೇಲೆ ಕೇಸ್ ದಾಖಲು ಮಾಡುವ ಮೊದಲು ಮುನಿಮಾರಮ್ಮ ನವರ ವಾರಸುದಾರರ ಬಗ್ಗೆ ನಾನು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ನಾನು ಕರಾರು ಪತ್ರ ಆದ ಮೇಲೆ ಎದುರುದಾರರು ನನಗೆ ನೋಂದಣಿ ಮಾಡಿಕೊಡದೇ ಇದ್ದಾಗ ನಾನು ವಿಚಾರಿಸಿದಾಗ ಪ್ರತಿವಾದಿ 1 ರಿಂದ 5 ರವರಿಗೆ ಬೇರೆ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**